ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ
ನ್ಯಾಯಾಲಯ, ಸಕಲೇಶಪುರ

# C.C.No.277/2024

| | | |
|---|---|---|
| ಹೆಸರುಃ | ಸಿ ಹರೀಶ್ | CW-6 |
| ತಂದೆ/ಗಂಡ ಹೆಸರುಃ | ಲೇಟ್ ಚನ್ನಶೇಖರ | PW-3 |
| ವಯಸ್ಸುಃ | 46 ವರ್ಷ | |
| ವೃತ್ತಿಃ | ಅಬಕಾರಿ ಉಪನಿರೀಕ್ಷಕರು ,<br>ಅಬಕಾರಿ ನಿರೀಕ್ಷಕರ ಕಚೇರಿ, ಹಾಸನ<br>ವಲಯ 2 | |
| ವಿಳಾಸಃ | ಹಾಸನ | ದಿನಾಂಕಃ 27-11-2024 |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.
ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ

ನಾನು 19.10.2023 ರಿಂದ 29.12.2023 ರ ವರಗೆ ಹೆಚ್ಚುವರಿ ಪ್ರಭಾರಿ ಅಬಕಾರಿ ಉಪನೀರಿಕ್ಷಕರಾಗಿ ಸಕಲೇಶಪುರ ಅಬಕಾರಿ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ 04-11-2023 ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಚಾಸಾ-3 ಮತ್ತು ಗೌಸ್ ರವರೊಂದಿಗೆ ಹೆತ್ತೂರು ಗ್ರಾಮದಲ್ಲಿ ಗಸ್ತು ಕಾರ್ಯ ಮಾಡುತ್ತಿದ್ದಾಗ ನನಗೆ ಕಿರ್ಕಳ್ಳಿ ಗ್ರಾಮದಲ್ಲಿ ಪರಮೇಶ ಎಂಬುವವರು ತಮಗೆ ಸೇರಿದ ದನದ ಕೊಟ್ಟಿಗೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಹಾಗೂ ಕಳ್ಳಭಟ್ಟಿ ಸಾರಾಯಿ ತಯಾರಿಕೆಗೆ ಬಳಸಲು ಬೆಲ್ಲದ ಕೊಳೆಯನ್ನು ಸಂಗ್ರಹಿಸಿರುವುದಾಗಿ ಬಂದ ಮಾಹಿತಿಯ ಮೇರೆಗೆ, ಸದರಿ ಗ್ರಾಮಕ್ಕೆ ತೆರಳಿ ರಸ್ತೆ ಬದಿಯಲ್ಲಿ ನಿಂತಿದ್ದ ಇಬ್ಬರು ವ್ಯಕ್ತಿಗಳಾದ ಚಾಸಾ-1 ಮತ್ತು 2 ರವರನ್ನು ಪಂಚರಾಗಿ ನೇಮಕ ಮಾಡಿಕೊಂಡು ಅವರಿಗೆ ಬಂದ ಮಾಹಿತಿ ತಿಳಿಸಿ ಸದರಿ ಗ್ರಾಮದ ವಾಸಿ ಪರಮೇಶ ಕೆ ಕೆ ಬಿನ್ ಲೇಟ್ ಕೋಮಾರಿಗೌಡರವರ ವಾಸದ ಮನೆಯ ಪಕ್ಕದ ದನದ ಕೊಟ್ಟಿಗೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಮತ್ತು ಬೆಲ್ಲದ ಕೊಳೆಯನ್ನು ಹೊಂದಿರುವ ಬಗ್ಗೆ ಮಾಹಿತಿಯನ್ನು ತಿಳಿಸಿ ಪಂಚರಾಗಿ ಬರಲು ಕೇಳಿದಾಗ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಮಾಹಿತಿ ಇದ್ದ ಮನೆ ಬಳಿ ತೆರಳಿ ಮನೆಯಲ್ಲಿದ್ದ ಒಬ್ಬ ವ್ಯಕ್ತಿಯನ್ನು ಕರೆದು, ಆತನಿಗೆ ನಾವು ಬಂದ ವಿಷಯವನ್ನು ತಿಳಿಸಿ, ಶೋಧನೆ ಮಾಡಲು ಶೋಧನಾ ಸಮುಚ್ಚಿತ ಆಧಾರ ತಯಾರಿಸಿ, ದನದ ಕೊಟ್ಟಿಗೆಯನ್ನು ಶೋಧನೆ ಮಾಡಲಾಗಿ ಪಶ್ಚಿಮ ಭಾಗದಲ್ಲಿ 3 ಲೀಟರ್ ಸಾಮಥ್ಯ ದ ಒಂದು ಸ್ಟೀಲ್ ಕ್ಯಾರಿಯರ್ ಮತ್ತು 20 ಲೀಟರ್ ಸಾಮರ್ಥ್ಯ ದ ಕಂದುಬಣ್ಣದ ಪ್ಲಾಸ್ಟಿಕ್

ಕೊಡ, ಬಿಳಿ ಮತ್ತು ನೀಲಿ ಬಣ್ಣದ ಪ್ಲಾಸ್ಟಿಕ್ ಬಕೆಟ್ ಮತ್ತು 50 ಲೀಟರ್ ಸಾಮರ್ಥ್ಯ ದ ಇಡ್ಲಿ ಪಾತ್ರೆ ಇರುವುದು ಕಂಡುಬಂದಿರುತ್ತದೆ. ಅವುಗಳನ್ನು ಪರಿಶೀಲಿಸಿದಾಗ ಕ್ಯಾರಿಯರ್ 03 ಲೀ ಸಾಮರ್ಥ್ಯದ್ದಾಗಿದ್ದು ಅದರಲ್ಲಿ 02 ಲೀ ಕಳ್ಳಭಟ್ಟಿ ಸಾರಾಯಿ ಇರುತ್ತದೆ. ಕಂದುಬಣ್ಣದ 20 ಲೀ ಕೊಡದಲ್ಲಿ 20 ಲೀ ನಷ್ಟು ಬೆಲ್ಲದ ಕೊಳೆ ಇರುತ್ತದೆ. ಪ್ಲಾಸ್ಟಿಕ್ ಬಕೆಟ್ ಗಳಲ್ಲಿ 10 ಲೀ. ನಷ್ಟು ಬೆಲ್ಲದ ಕೊಳೆ ಇರುತ್ತದೆ. ನಂತರ ದೊರೆತ ಮುದ್ದೆಮಾಲುಗಳಿಂದ, ಸ್ಟೀಲ್ ಕ್ಯಾರಿಯರ್ ನಿಂದ 500 ಎಂ ಎಲ್ ಕಳ್ಳಭಟ್ಟಿ ಸಾರಾಯಿ ಹಾಗೂ ಪ್ಲಾಸ್ಟಿಕ್ ಕೊಡದಿಂದ 500 ಎಂ ಎಲ್ ನಷ್ಟು ಬೆಲ್ಲದ ಕೊಳೆಯನ್ನು ಹಾಗೂ ಪ್ಲಾಸ್ಟಿಕ್ ಬಕೆಟ್ ನಿಂದ 500 ಎಂ ಎಲ್ ನಷ್ಟು ಬೆಲ್ಲದ ಕೊಳೆಯನ್ನು 500 ಎಂ ಎಲ್ ನ ಪ್ಲಾಸ್ಟಿಕ್ ಬಾಟಲಿಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಬಟ್ಟೆಯನ್ನು ಸುತ್ತಿ, ದಾರದಿಂದ ಕಟ್ಟಿ ಅರಗನ್ನು ಹಾಕಿ ಇಲಾಖಾ ಸೀಲು ಸಂಖ್ಯೆಃ 338 ರಿಂದ ಮೊಹರು ಮಾಡಿರುತ್ತೇವೆ. ನಂತರ ಮಾದರಿ ಸೀಲು ಮತ್ತು ಮಾದರಿ ಚೀಟಿಯನ್ನು ತಯಾರಿಸಿಕೊಂಡು ಮಾದರಿ ಚೀಟಿಗಳನ್ನು ಮುದ್ದೆಮಾಲಿನ ಮೇಲೆ ಮತ್ತು ಮಾದರಿ ಬಾಟಲುಗಳ ಮೇಲೆ ಅಂಟಿಸಿರುತ್ತೇವೆ. ಸ್ಥಳದ ಚೆಕ್ಕುಬಂದಿಯನ್ನು ಪರಿಶೀಲಿಸಿದಾಗ ಪೂಃ ಖಾಲಿ ಜಾಗ ಪಃ ಖಾಲಿ ಜಾಗ ಉಃ ಆರೋಪಿಗೆ ಸೇರಿದ ವಾಸದ ಮನೆ ದಃ ಖಾಲಿ ಜಾಗ ಇರುತ್ತದೆ.

ಆರೋಪಿಯ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ಆತನ ಹೆಸರು ಪರಮೇಶ ಕೆ ಕೆ ಬಿನ್ ಲೇಟ್ ಕೋಮಾರಿಗೌಡ, 63 ವರ್ಷ, ಕಿರ್ಕಳ್ಳಿ ಗ್ರಾಮ, ಹೆತ್ತೂರು ಹೋಬಳಿ ಎಂದು ತಿಳಿಸಿರುತ್ತಾನೆ. ನಂತರ ಆರೋಪಿಯನ್ನು ಪಂಚರ ಸಮಕ್ಷಮ ದಸ್ತಗಿರಿ ಮಾಡಿರುತ್ತೇವೆ. ಪಂಚನಾಮೆಯನ್ನು ಸಂಜೆ 4 ರಿಂದ 5 ರವರೆಗೆ ನಾನೇ ಬರೆದಿರುತ್ತೇನೆ. ದೊರೆತ ಮುದ್ದೆಮಾಲು ಮತ್ತು ಆರೋಪಿಯನ್ನು ಕಛೇರಿಗೆ ಕರೆತಂದು, ಆರೋಪಿಗೆ ದಸ್ತಗಿರಿ ನೋಟೀಸ್ ನ್ನು ಜಾರಿ ಮಾಡಿ, ದಸ್ತಗಿರಿ ವಿಚಾರವನ್ನು ಆತನ ಮಗನಿಗೆ ತಿಳಿಸಿ ತಿಳುವಳಿಕೆ ನೋಟೀಸ್ ನೀಡಿರುತ್ತೇನೆ. ಠಾಣೆಯಲ್ಲಿ ಸ್ವ ದೂರು ನೀಡಿ ದಾಖಲಿಸಿ, ಪ್ರ ವ ವ ಯನ್ನು ತಯಾರಿಸಿರುತ್ತೇನೆ. ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಹಾಜರುಪಡಿಸಿರುತ್ತೇವೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ ಮತ್ತು ಮೂ ಮಾ ಗಳನ್ನು ನೋಡಿ ಗುರುತಿಸಿರುತ್ತಾರೆ. ಆನಂತರ ಈ ಪ್ರಕರಣದ ಕಡತವನ್ನು ಚಾಸಾ 7 ರವರಿಗೆ ವರ್ಗಾಯಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮೂರು ಬಾಟಲಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟುಗೂಡಿಸಿ ಮುಮಾ-1 ಅನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-1 ಎಂದು, ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿನ ಸಹಿಯನ್ನು ನಿಪಿ-2

ಬಿ ಎಂದು ಗುರುತಿಸಲಾಯಿತು. ಶೋಧನ ಸಮುಚ್ಚಿತ ಆಧಾರವನ್ನು ನಿಪಿ-4 ಎಂದು, ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ನಿವೇದನೆಯನ್ನು ನಿಪಿ-5 ಎಂದು, ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ಪ್ರ ವ ವ ಯನ್ನು ನಿಪಿ-6 ಎಂದು, ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎ ಪಿ ಎಂ ವಕೀಲರಿಂದ**

ಸಕಲೇಶಪುರದಿಂದ ನಾವು ಮದ್ಯಾಹ್ನ 12 ಗಂಟೆಗೆ ಬಿಟ್ಟಿದ್ದು ಹೆತ್ತೂರಿಗೆ 3 ಗಂಟೆಗೆ ಹೋಗಿರುತ್ತೇವೆ. ನಾವು ಒಟ್ಟು ನಾಲ್ಕು ಜನ ಗಸ್ತು ಕಾರ್ಯಕ್ಕೆ ಹೋಗಿರುತ್ತೇವೆ. ಚಾಸಾ 3, ಗೌಸ್ ಮತ್ತು ಖಾಸಗಿ ವಾಹನ ಚಾಲಕ ಹೋಗಿರುತ್ತೇವೆ. ಹೆತ್ತೂರಿನಿಂದ ಕಿರ್ಕಳ್ಳಿ ಗ್ರಾಮಕ್ಕೆ ಸುಮಾರು 5 ಕಿ ಮೀ ಆಗುತ್ತದೆ. ನಾವು ಹೆತ್ತೂರಿನ ಬಸ್ ನಿಲ್ದಾಣದ ಸುತ್ತಮುತ್ತ ಗಸ್ತು ಕಾರ್ಯ ಮಾಡುತ್ತಿದ್ದೇವು. ನಾವು ವಲಳಹಳ್ಳಿ ಮಾರ್ಗವಾಗಿ ಹೆತ್ತೂರಿಗೆ ಹೋಗಿರುತ್ತೇವೆ. ಸದರಿ ಮಾರ್ಗದ ಮಧ್ಯದಲ್ಲಿ ಇರುವ ಗ್ರಾಮಗಳ ಹೆಸರು ಗೊತ್ತಿಲ್ಲ. ಕಿರ್ಕಳ್ಳಿ ಗ್ರಾಮ ಹೆತ್ತೂರು ಆದ ನಂತರ ಬರುತ್ತದೆ. ಕಿರ್ಕಳ್ಳಿ ಗ್ರಾಮದಿಂದ ಬೇರೆ ಗ್ರಾಮಗಳ ಗಸ್ತು ಕಾರ್ಯ ಮಾಡಿರುವುದಿಲ್ಲ. ಆರೋಪಿ ಮನೆಯಿಂದ ಸುಮಾರು 500 ಮೀ ಅಂತರದಲ್ಲಿ ಪಂಚರು ಸಿಕ್ಕಿರುತ್ತಾರೆ. ಪಂಚರು ಇದ್ದಂತಹ ಜಾಗದಲ್ಲಿ ಮನೆಗಳು ಕಮ್ಮಿ ಇದ್ದವು. ಪಂಚರು ಆರೋಪಿ ಮನೆಯನ್ನು ಗುರುತಿಸಿರುತ್ತಾರೆ ಮತ್ತು ವಿಚಾರಣೆ ಸಹ ಮಾಡಿರುತ್ತೇವೆ. ಆರೋಪಿಗೆ ಸೇರಿದ ಮನೆಯ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇವೆ. ಕಿರ್ಕಳ್ಳಿ ಗ್ರಾಮದ ಪ್ರಾರಂಭದಲ್ಲಿ ಆರೋಪಿ ಮನೆ ಇರುತ್ತದೆ. ಆರೋಪಿ ಮನೆಯ ಸುತ್ತಮುತ್ತ 3-4 ಮನೆಗಳು ಇರುತ್ತವೆ. ನಾವು ಸಿಬ್ಬಂದಿ ಮತ್ತು ಪಂಚರು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಅಕ್ಕಪಕ್ಕದವರನ್ನು ಪಂಚನಾಮೆಗೆ ಕರೆದಿರುವುದಿಲ್ಲ.

ನಮ್ಮ ವಾಹನ ಸುಮಾರು 100 ಮೀ ಅಂತರದಲ್ಲಿ ನಿಲ್ಲಿಸಿದೆವು. ಮನೆ ಕಾಣದೇ ಇರುವ ರೀತಿ ನಿಲ್ಲಿಸಿದ್ದೇವು. ನಾವು ಮನೆಯ ಬಳಿ ಹೋದಾಗ ಆರೋಪಿ ಮನೆಯ ಒಳಗಡೆ ಇದ್ದರು. ದನದ ಕೊಟ್ಟಿಗೆ ಮನೆಯ ಉತ್ತರ ದಿಕ್ಕಿಗೆ ಇರುತ್ತದೆ. ಮನೆಯಿಂದ 3 ಅಡಿ ಅಂತರದಲ್ಲಿ ಇರುತ್ತದೆ. ಆರೋಪಿ ಮನೆಯ ಬಾಗಿಲು ಪೂರ್ವ ದಿಕ್ಕಿಗೆ ಇರುತ್ತದೆ. ಮೂ ಮಾ ಗಳ ಮೇಲೆ ಪ್ಲಾಸ್ಟಿಕ್ ಮುಚ್ಚಿರಲಿಲ್ಲ. ಕ್ಯಾರಿಯರ್ ಗೆ ಮುಚ್ಚುಳ ಇತ್ತು. ಬಕೆಟ್ ಮತ್ತು ಕೊಡಕ್ಕೆ ಮುಚ್ಚಿರಲಿಲ್ಲ. ದನದ ಕೊಟ್ಟಿಗೆ ಮಂಗಳೂರು ಹಂಚಿನ ಕೊಟ್ಟಿಗೆ ಯಾಗಿದ್ದು ಗೋಡೆ ಕಟ್ಟಿದ್ದರು. ಮೂ ಮಾ ಗಳ ಅಳತೆ ಮಾಡಿರುವುದಿಲ್ಲ. ಆದರೆ ಕಣ್ಣ ಅಳತೆ ಮಾಡಿರುತ್ತೇವೆ. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ.

ಘಟನಾ ಸ್ಥಳದಿಂದ ನಮ್ಮ ಮೇಲಾಧಿಕಾರಿಗಳಿಗೆ ದೂರು ದಾಖಲು ಮಾಡಿರುವುದಿಲ್ಲ. ಆದರೆ ನಾನು ಬಂದ ನಂತರ ದೂರು ದಾಖಲು ಮಾಡಿರುತ್ತೇನೆ. ಆರೋಪಿ ಮನೆಯನ್ನು

ಪರಿಶೀಲನೆ ಮಾಡಿರುವುದಿಲ್ಲ. ಸದರಿ ದಿನ ಆರೋಪಿ ಮನೆಯಲ್ಲಿ ಒಬ್ಬರೇ ಇದ್ದರು. ಆರೋಪಿಯನ್ನು ಸ್ಥಳದಲ್ಲಿ ವಿಚಾರ ಮಾಡಿರುತ್ತೇವೆ. ದಾಳಿ ನೆಡೆಸುವ ಪೂರ್ವದಲ್ಲಿ ದಸ್ತಗಿರಿ ಮಾಡಿರುವುದಿಲ್ಲ. ಮೂ ಮಾ ಗಳ ಮೇಲೆ ಚಾಸಾ 3 ರವರು ಚೀಟಿ ಅಂಟಿಸಿರುತ್ತಾರೆ. ಪಂಚಾನಾಮೆಯಲ್ಲಿ ಮತ್ತು ದೂರಿನಲ್ಲಿ ಆರೋಪಿ ಮೊದಲಿನಿಂದಲೂ ಸ್ಥಳದಲ್ಲಿ ಇದ್ದು ಅವರನ್ನು ದಸ್ತಗಿರಿ ಮಾಡಿರುವುದಾಗಿ ನಮೂದಿಸಿರುತ್ತೇವೆ.

ಮಾದರಿ ಶೇಖರಣೆಗಾಗಿ ನೀರಿನ ಬಾಟಲ್ ಗಳನ್ನು ತೆಗೆದುಕೊಂಡು ಹೋಗಿರುತ್ತೇವೆ. ಸದರಿ ಬಾಟಲ್ ಗಳು ಯಾವ ಕಂಪನಿಯದ್ದು ಎಂದು ಇಲ್ಲ ಎಂದರೆ ಸರಿ. ಸ್ದಳದಲ್ಲಿ ಪೋಟೋ ತೆಗೆದಿರುವುದಿಲ್ಲ. ಕಚೇರಿಗೆ ಬಂದ ನಂತರ ಸಹ ಪೋಟೋ ತೆಗೆದಿರುವುದಿಲ್ಲ. ಕಡುಬಿನ ಪಾತ್ರೆ ಮತ್ತು ಸ್ಟೀಲ್ ಪಾತ್ರೆಗೆ ಮುಚ್ಚಳ ಇತ್ತು. ಅವುಗಳಿಗೆ ಮಾದರಿ ಚೀಟಿ ಅಂಟಿಸಿರುತ್ತೇವೆ. ಪ್ರತ್ಯೇಕ ನಂಬರ್ ನೀಡಿರುವುದಿಲ್ಲ.

ನಾವು ಸ್ಥಳಕ್ಕೆ ಹೋಗಿರುವುದಿಲ್ಲ, ಆರೋಪಿ ಮನೆಯ ಮೇಲೆ ದಾಳಿ ಮಾಡಿರುವುದಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಮಹಜರ್ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಹಜರನ್ನು ಕಚೇರಿಯಲ್ಲಿ ತಯಾರಿಸಿ ಪಂಚರ ಸಹಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಾನು ಇಲಾಖಾ ಅಂಕಿಅಂಶಗಳಿಗೋಸ್ಕರ ದಾಖಲಿಸಿದ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸ ಇ

ಸಹಿ/-

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಸಕಲೇಶಪುರ